


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಬಿಅ್‌ರ್ ಮಊನ ಘಟನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–06–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಬಿಅ್‌ರ್ ಮಊನ ಘಟನೆಯ ಹಿನ್ನಲೆ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[ರ] ಹೀಗೆ ಬರೆದಿದ್ದಾರೆ:

ಅರಬ್ ಗೋತ್ರಗಳಾದ ಸುಲೈಮ್ ಮತ್ತು ಗತ್‌ಫಾನ್ ನಜ್‌ದ್ ಪ್ರದೇಶದ ಬೆಟ್ಟಗಳಲ್ಲಿ ವಾಸಿಸುತ್ತಿದ್ದರು. ಮುಸ್ಲಿಮರ ವಿರುದ್ಧ ಮಕ್ಕದ ಬಹುದೇವಾರಾಧಕರೊಂದಿಗೆ ರಹಸ್ಯ ಒಪ್ಪಂದ ಮಾಡಿಕೊಂಡಿದ್ದರು. ಬನೂ ಆಮಿರ್ ಗೋತ್ರದ ಒಬ್ಬ ಮುಖಂಡನಾದ ಅಬೂ ಬರಾಅ್ ಆಮಿರಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಭೇಟಿಯಾಗಲು ಬಂದಾಗ ಅವನಿಗೆ ಬಹಳ ಮೃದುವಾಗಿ ಮತ್ತು ವಾತ್ಸಲ್ಯಭರಿತರಾಗಿ ಇಸ್ಲಾಮಿನ ತಬ್ಲೀಗ್ ಮಾಡಲಾಯಿತು. ಅವನು ಬಾಹ್ಯವಾಗಿ ಅಭಿರುಚಿ ಸೂಚಿಸುತ್ತಾ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ಬಹಳ ಆಸಕ್ತಿಯಿಂದ ಆಲಿಸಿದನು. ಆದರೆ ಅವನು ಮುಸ್ಲಿಮನಾಗಲಿಲ್ಲ. ಅವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೀಗೆ ಅಪೇಕ್ಷಿಸಿದನು. ತಾವು ನನ್ನ ಜೊತೆಗೆ ಕೆಲವು ಸಹಾಬರನ್ನು ಕಳುಹಿಸಿರಿ. ಅವರು ನಜ್‌ದ್ ನಿವಾಸಿಗಳಿಗೆ ತಬ್ಲೀಗ್ ಮಾಡಲಿ. ಅಲ್ಲಿನ ನಿವಾಸಿಗಳು ನಿಮ್ಮ ಆಹ್ವಾನವನ್ನು ನಿರಾಕರಿಸಲಾರರು ಎಂದು ನಾನು ಪ್ರತೀಕ್ಷಿಸುತ್ತೇನೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನನಗೆ ನಜ್‌ದ್ ನಿವಾಸಿಗಳ ಬಗ್ಗೆ ಶುಭಪ್ರತೀಕ್ಷೆ ಇಲ್ಲ. ಆಗ ಅಬೂ ಬರಾಅ್‌ನು ತನ್ನೊಂದಿಗೆ ಬರುವವರಿಗೆ ಸಂರಕ್ಷಣೆ ನೀಡುವುದಾಗಿ ಖಾತರಿ ನೀಡಿದನು. ಅವನು ಒಂದು ಗೋತ್ರದ ಮುಖಂಡನೂ ಪ್ರಭಾವಶಾಲಿಯೂ ಆಗಿದ್ದ ಕಾರಣ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವನ ಬಗ್ಗೆ ದೃಢವಿಶ್ವಾಸ ಹೊಂದಿದರು ಮತ್ತು ಸಹಾಬರ ಒಂದು ಗುಂಪನ್ನು ನಜ್‌ದ್‌ಗೆ ಕಳುಹಿಸಿದರು. ಬುಖಾರಿಯ ಹದೀಸ್ ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ: ರಅ್‌ಲ್ ಮತ್ತು ಝುಕ್‌ವಾನ್ ಮೊದಲಾದ ಗೋತ್ರಗಳ ಜನರು ತಾವು ಇಸ್ಲಾಮ್ ಧರ್ಮವನ್ನು ಸೇರಿರುವುದಾಗಿ ಹೇಳಿ ತಮ್ಮ ಕೋಮಿನಲ್ಲಿರುವ ಇಸ್ಲಾಮಿನ ಶತ್ರುಗಳ ವಿರುದ್ಧ ತಮಗೆ ಸಹಾಯ ಮಾಡಬೇಕೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮನವಿ ಸಲ್ಲಿಸಿದರು. ಆ ಮನವಿ ಅಂಗೀಕರಿಸಿ ಸಹಾಬರ ಈ ಗುಂಪನ್ನು ಕಳುಹಿಸಿದ್ದರು.

ಅಬೂ ಬರಾಅ್ ಸಹ ಆ ಗೋತ್ರಗಳ ಜನರೊಂದಿಗೆ ಆಗಮಿಸಿರುವ ಸಾಧ್ಯತೆಗಳಿವೆ. ಅಂತೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜರಿ ವರ್ಷ ನಾಲ್ಕು ಸಫರ್ ತಿಂಗಳಲ್ಲಿ ಮುನ್‌ಝಿರ್ ಬಿನ್ ಅಮರ್[ರ]ರ ನಾಯಕತ್ವದಲ್ಲಿ ಎಪ್ಪತ್ತು ಸಹಾಬರ ಒಂದು ಗುಂಪನ್ನು ಕಳುಹಿಸಿದರು. ಅವರೆಲ್ಲರೂ ಪವಿತ್ರ ಖುರ್‌ಆನ್ ಪಠಿಸುವವರಾಗಿದ್ದರು.

ಇಷ್ಟು ದೊಡ್ಡ ನಿರ್ಧಾರವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಾಡಿದುದು ಇಸ್ಲಾಮ್ ಧರ್ಮ ಪ್ರಚಾರವನ್ನು ಮಾಡುವ ಕಡ್ಡಾಯ ಕರ್ತವ್ಯವನ್ನು ಈಡೇರಿಸಲು ಮತ್ತು ಆ ಪವಿತ್ರ ಕೆಲಸವನ್ನು ವರ್ಧಿಸಲಿಕ್ಕೋಸ್ಕರವಾಗಿತ್ತು.

ಈ ಘಟನೆಗೆ ಸಂಬಂಧಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆಮಿರ್ ಬಿನ್ ತುಫೈಲ್‌ಗೆ ಬರೆದ ಒಂದು ಪತ್ರದ ಬಗ್ಗೆಯೂ ಪ್ರಸ್ತಾಪಿಸಲಾಗುತ್ತಿದೆ. ಹಝ್ರತ್ ಹರಾಮ್ ಬಿನ್ ಮಲ್‌ಹಾನ್[ರ] ತಮ್ಮ ಇಬ್ಬರು ಜೊತೆಗಾರರಾದ ಹಝ್ರತ್ ಝೈದ್ ಬಿನ್ ಕಅಬ್[ರ] ಮತ್ತು ಹಝ್ರತ್ ಮುನ್‌ಝಿರ್ ಬಿನ್ ಮುಹಮ್ಮದ್‌ರ ಜೊತೆಗೆ ಪತ್ರವನ್ನು ಆಮಿರ್ ಬಿನ್ ತುಫೈಲ್‌ಗೆ ನೀಡಲು ಹೋದರು. ಆಮಿರ್ ಕಾಪಟ್ಯದಿಂದ ಅವರನ್ನು ಸ್ವಾಗತಿಸಿದನು. ಆದರೆ ಹಝ್ರತ್ ಹರಾಮ್ ಬಿನ್ ಮಲ್‌ಹಾನ್[ರ] ತಬ್ಲೀಗ್ ಮಾಡಲು ಪ್ರಾರಂಭಿಸಿದಾಗ ಅಲ್ಲಿ ಹಾಜರಿದ್ದವರು ತಮ್ಮ ನೀಚತನವನ್ನು ಪ್ರಕಟಪಡಿಸುತ್ತಾ ಆ ನಿಷ್ಕಳಂಕ ದೂತನನ್ನು ಹಿಂಬಾಗದಿಂದ ಈಟಿಯಿಂದ ತಿವಿದು ಕೊಂದರು. ಆಗ ಹಝ್ರತ್ ಹರಾಮ್ ಬಿನ್ ಮಲ್‌ಹಾನ್[ರ]ರ ನಾಲಗೆಯಿಂದ ಈ ಮಾತುಗಳು ಹೊರಟುವು **ಅಲ್ಲಾಹು ಅಕ್‌ಬರ್ ಫುಝ್‌ತು ವರಬ್ಬಿಲ್ ಕಅಬ**. (ಅಲ್ಲಾಹು ಅಕ್‌ಬರ್ ಕಅಬದ ಪ್ರಭುವಿನಾಣೆ ನಾನು ಜಯಶಾಲಿ ಆದೆನು.) ಆಮಿರ್ ತನ್ನ ಗೋತ್ರದ ಜನರನ್ನು ಉತ್ತೇಜಿಸಿ ಅಲ್ಲಿದ್ದ ಇತರ ಮುಸ್ಲಿಮರನ್ನು ಹತ್ಯೆ ಮಾಡಲು ಹೇಳಿದನು. ಆದರೆ ಆತನ ಮಾತಿಗೆ ಅವರು ಒಪ್ಪಲಿಲ್ಲ. ಆಗ ಆಮಿರ್ ಸುಲೈಮ್ ಗೋತ್ರದ ರಅ್‌ಲ್, ಝುಕ್ವಾನ್ ಮತ್ತು ಅಸಿಯ್ಯರೊಂದಿಗೆ ಸೇರಿಕೊಂಡು ನಿರಪರಾಧಿಗಳೂ ನಿರಾಯುಧರೂ ಆದ ಆ ಮುಸ್ಲಿಮರ ಗುಂಪನ್ನು ಆಕ್ರಮಣ ಮಾಡಿದನು. ಮುಸ್ಲಿಮರು ಆ ಅನಾಗರಿಕ ಕ್ರೂರಿಗಳೊಂದಿಗೆ ಹೇಳಿದರು: ನಮಗೆ ನಿಮ್ಮೊಂದಿಗೆ ಯಾವ ಹಗೆತನವೂ ಇಲ್ಲ. ನಾವು ಒಂದು ನಿಗದಿತ ಕೆಲಸಕ್ಕೋಸ್ಕರ ಬಂದಿದ್ದೇವೆ. ಆದರೆ ಅವರ ಮಾತನ್ನು ಗಮನಿಸದೆ ಶತ್ರುಗಳು ಎಲ್ಲರನ್ನೂ ಕೊಂದರು.

ಈ ಘಟನೆಯಲ್ಲಿ ಹಝ್ರತ್ ಅಬೂಬಕರ್ ವಿಮೋಚಿಸಿದ ಗುಲಾಮನಾದ ಹಝ್ರತ್ ಆಮಿರ್ ಬಿನ್ ಫಹೀರ ಎಂಬವರು ಸಹ ಶಹೀದ್ ಆದ ಬಗ್ಗೆ ಪ್ರಸ್ತಾಪಿಸಲಾಗುತ್ತಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್

ಅಬೂಬಕರ್(ರ) ಮದೀನಕ್ಕೆ ಹಿಜ್‌ರತ್ ಮಾಡಿದಾಗ ಹಝ್ರತ್ ಆಮಿರ್ ಬಿನ್ ಫಹೀರ(ರ) ಅವರ ಜೊತೆಗಿದ್ದರು. ಅವರು ಸಹ ಬಿಅ್‌ರ್ ಮಊನದ ಘಟನೆ ಸಂದರ್ಭದಲ್ಲಿ ಶಹೀದರಾದರು. ಅವರ ಬಗ್ಗೆ ಆಮಿರ್ ಬಿನ್ ತುಫೈಲ್ ಹೇಳಿದ್ದಾನೆ: ನಾನು ನೋಡಿದೆ, ಆಮಿರ್ ಬಿನ್ ಫಹೀರ ಕೊಲ್ಲಲ್ಪಟ್ಟ ನಂತರ ಅವರ ದೇಹ ಆಕಾಶಕ್ಕೆ ಎತ್ತಲ್ಪಟ್ಟಿತು. ಅದು ಆಕಾಶದ ಮತ್ತು ಭೂಮಿಯ ಮಧ್ಯೆ ಇತ್ತು. ಅನಂತರ ಅದನ್ನು ಕೆಳಗೆ ಭೂಮಿಗೆ ಇಳಿಸಲಾಯಿತು. ಆಮಿರ್ ಬಿನ್ ತುಫೈಲ್ ಆಗ ಮುಸ್ಲಿಮನಾಗಿರದಿದ್ದರೂ ಆ ದೃಶ್ಯ ಕಂಡಿದ್ದನು.

ಸಹಾಬರು ಕೊಲ್ಲಲ್ಪಟ್ಟ ಸಮಾಚಾರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿದಾಗ ಆ ಸಮಾಚಾರವನ್ನು ಸಹಾಬರಿಗೆ ತಿಳಿಸಲಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಕೊಲ್ಲಲ್ಪಟ್ಟ ಸಹಾಬರು ಪ್ರಾರ್ಥಿಸಿದ್ದರು – ನಮ್ಮ ಪ್ರಭೂ ನಮ್ಮ ಬಗ್ಗೆ ನಮ್ಮ ಸಹೋದರರಿಗೆ ತಿಳಿಸು. ನಾವು ನಿನ್ನ ಬಗ್ಗೆ ತೃಪ್ತರಾಗಿದ್ದೇವೆ. ನೀನು ನಮ್ಮಿಂದ ತೃಪ್ತನಾಗಿರುವೆ ಎಂದು.

ಹಝ್ರತ್ ಆಮಿರ್ ಬಿನ್ ಫಹೀರರನ್ನು ಹತ್ಯೆ ಮಾಡಿದ ಜಬ್ಬಾರ್ ಬಿನ್ ಸಲ್ಮಾ ಅನಂತರ ಮುಸ್ಲಿಮರಾದರು. ಅವರು ಹೇಳುತ್ತಾರೆ: ನನ್ನನ್ನು ಇಸ್ಲಾಮ್ ಕಡೆಗೆ ಆಕರ್ಷಿಸಿದುದು ಏನೆಂದರೆ ನಾನು ಆಮಿರ್ ಬಿನ್ ಫಹೀರರನ್ನು ಶಹೀದರನ್ನಾಗಿ ಮಾಡಿದಾಗ ಅವರ ಬಾಯಿಯಿಂದ ತಾನಾಗಿ ಈ ಶಬ್ದಗಳು ಹೊರಬಂದುವು. **ಫುಝ್ತು ವರಬ್ಬಿಲ್ ಕಅಬ** (ಕಅಬದ ಪ್ರಭುವಿನ ಆಣೆ ನಾನು ಜಯಶಾಲಿ ಆದೆನು.) ಈ ಮಾತುಗಳು ನನ್ನ ಹೃದಯದೊಳಗೆ ಇಳಿದುವು. ಈ ಮಾತಿನ ಅರ್ಥ ಏನೆಂದು ನಾನು ಯೋಚಿಸ ತೊಡಗಿದೆ. ನಾನು ಅನಂತರ ಜನರೊಂದಿಗೆ ಅದರ ಕಾರಣವೇನೆಂದು ಕೇಳಿದಾಗ ನನಗೆ ತಿಳಿಯಿತು. ಮುಸ್ಲಿಮರು ಅಲ್ಲಾಹನ ಮಾರ್ಗದಲ್ಲಿ ಜೀವವನ್ನು ಅರ್ಪಿಸುವುದನ್ನು ಬಹಳ ದೊಡ್ಡ ಯಶಸ್ಸು ಎಂದು ಗಣಿಸುತ್ತಾರೆ. ಈ ವಿಷಯ ನನ್ನ ಮೇಲೆ ಎಷ್ಟು ಪ್ರಭಾವ ಬೀರಿತು ಎಂದರೆ ನಾನು ಮುಸ್ಲಿಮನಾದೆನು.

ಈ ಘಟನೆಯಲ್ಲಿ ಸೇರಿದ ಎಲ್ಲ ಸಹಾಬರ ಹೆಸರು ಜೀವನ ಚರಿತ್ರೆ ಗ್ರಂಥಗಳಲ್ಲಾಗಲಿ ಇತರ ಚರಿತ್ರೆ ಗ್ರಂಥಗಳಲ್ಲಾಗಲೀ ಉಲ್ಲೇಖಿತವಾಗಿಲ್ಲ. ಅಂದಾಜು 29 ಸಹಾಬರ ಹೆಸರು ಮಾತ್ರ ದಾಖಲಿಸಲ್ಪಟ್ಟಿದೆ. ಕೊಲ್ಲಲ್ಪಡದೆ ರಕ್ಷಿಸಲ್ಪಟ್ಟ ಇಬ್ಬರು ಸಹಾಬರ ಹೆಸರುಗಳು ಹೀಗಿವೆ. ಹಝ್ರತ್ ಅಮರ್ ಬಿನ್ ಉಮಯ್ಯ ಝುಮ್‌ರಿ(ರ) ಮತ್ತು ಹಝ್ರತ್ ಮುಂಝಿರ್ ಬಿನ್ ಮುಹಮ್ಮದ್(ರ). ಅನಂತರ ಹಝ್ರತ್ ಮುಂಝಿರ್(ರ) ಹೋರಾಡುತ್ತಾ ಶಹೀದರಾದರು. ಆಮಿರ್ ಬಿನ್ ತುಫೈಲ್ ತನ್ನ ತಾಯಿಯ ಪರವಾಗಿ ಒಬ್ಬ ಗುಲಾಮನನ್ನು ವಿಮೋಚಿಸುವುದಾಗಿ ಹರಕೆ ಮಾಡಿದ ಕಾರಣದಿಂದ ಮತ್ತು ಅವನು ಹಝ್ರತ್ ಅಮರ್(ರ)ರವರ ಗೋತ್ರವಾದ ಮುಝಿರ್‌ನೊಂದಿಗೆ ಸಂಬಂಧವನ್ನು ಹೊಂದಿದ ಕಾರಣದಿಂದ ಅರಬ್ ಆಚಾರ ಪ್ರಕಾರ ಹಝ್ರತ್ ಅಮರ್(ರ)ರವರ ಹಣೆಯ ಮೇಲಿನ ಭಾಗದ ಕೆಲವು ಕೂದಲುಗಳನ್ನು ಕತ್ತರಿಸಿದ ನಂತರ ಅವರನ್ನು ವಿಮೋಚಿಸಿದನು. ಅಲ್ಲಿಂದ ಹೊರಟ ಹಝ್ರತ್ ಅಮರ್(ರ) ಒಂದು ಸ್ಥಳದಲ್ಲಿ ಬನೂ ಆಮಿರ್ ಅಥವಾ ಬನೂ ಸುಲೈಮ್ ಗೋತ್ರದ ಇಬ್ಬರನ್ನು ವಧಿಸಿದರು. ಆದರೆ ಆ ಎರಡು ಗೋತ್ರಗಳೊಂದಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶಾಂತಿಯ ಒಪ್ಪಂದ ಮಾಡಿದ್ದರು. ಆದರೆ ಅದು ಹಝ್ರತ್ ಅಮರ್(ರ)ರಿಗೆ ತಿಳಿದಿರಲಿಲ್ಲ ಆದುದರಿಂದ ಅವರ ಪರಿಹಾರ ಧನ ನೀಡಲಾಯಿತು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಮತ್ತು ಸಹಾಬರಿಗೆ ರಜೀಅ್ ಘಟನೆ ಮತ್ತು ಬಿಅ್‌ರ್ ಮಊನ ಘಟನೆ ಬಗ್ಗೆ ಸಮಾಚಾರಗಳು ಅಂದಾಜು ಒಂದೇ ಸಮಯದಲ್ಲಿ ಲಭಿಸಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತೀವ್ರ ದುಃಖವಾಯಿತು. ಅದಕ್ಕಿಂತ ಮೊದಲು ಮತ್ತು ಅನಂತರ ಅಂತಹ ದುಃಖ ಅವರು ಅನುಭವಿಸಲಿಲ್ಲ. ಅಂದಾಜು 80 ಸಹಾಬರು ಈ ರೀತಿ ವಂಚಿಸಲ್ಪಟ್ಟು ಅಚಾನಕವಾಗಿ ಕೊಲ್ಲಲ್ಪಟ್ಟರು. ಅವರಲ್ಲಿ ಬಹುತೇಕ ಮಂದಿ ಪವಿತ್ರ ಖುರ್‌ಆನ್ ಬಾಯಿಪಾಠ ಮಾಡಿದ ಹಾಫಿಝ್‌ಗಳಾಗಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಆ ಸಮಾಚಾರ ತನ್ನ ಎಂಬತ್ತು ಪುತ್ರರ ಮೃತ್ಯುವಿಗೆ ಸಮಾನವಾದ ಸಮಾಚಾರವಾಗಿತ್ತು. ಆದರೆ ಎಲ್ಲ ಸಂದರ್ಭಗಳಲ್ಲೂ ಸಹನೆದೋರಬೇಕೆಂಬ ಉಪದೇಶವನ್ನು ಇಸ್ಲಾಮ್ ನೀಡುತ್ತಿದೆ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸಮಾಚಾರವನ್ನು ಆಲಿಸಿ **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಹೇಳುತ್ತಾ ಹೀಗೆ ಹೇಳಿದರು: ಹೀಗೆ ಸಂಭವಿಸಿದುದು ಅಬೂ ಬರಾಅ್‌ನ ಕಾರಣದಿಂದಾಗಿದೆ. ನಾನು ಅವರನ್ನು ಕಳುಹಿಸಲು ಇಷ್ಟಪಟ್ಟಿರಲಿಲ್ಲ. ಅನಂತರ ಮೌನವನ್ನು ಅವಲಂಬಿಸಿದರು.

ರಜೀಅ್ ಘಟನೆ ಮತ್ತು ಬಿಅ್‌ರ್ ಮಊನ ಘಟನೆ ಸಂಭವಿಸಿದ ನಂತರ ಒಂದು ತಿಂಗಳು ಪ್ರತಿದಿನ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸುಬ್‌ಹ್ ನಮಾಝ್‌ನಲ್ಲಿ ಅತ್ಯಂತ ದುಃಖದಿಂದ ರಅ್‌ಲ್, ಝುಕ್‌ವಾನ್, ಅಸಿಯ್ಯಾ ಮತ್ತು ಬನೂ ಲಹ್‌ಯಾನ್ ಗೋತ್ರಗಳ ಹೆಸರು ಹೇಳುತ್ತಾ ಅಲ್ಲಾಹನ ಸನ್ನಿಧಿಯಲ್ಲಿ ಹೀಗೆ ಪ್ರಾರ್ಥಿಸುತ್ತಿದ್ದರು: ಹೇ ನಮ್ಮ ಪ್ರಭೂ, ನಮ್ಮ ಸ್ಥಿತಿಯ ಬಗ್ಗೆ ಕರುಣೆದೋರು. ಇಸ್ಲಾಮಿನ ಶತ್ರುಗಳನ್ನು ತಡೆಗಟ್ಟು ಅವರು ನಿನ್ನ ಧರ್ಮವನ್ನು ನಾಶಮಾಡಲು ನಿಷ್ಕರುಣೆಯಿಂದ ಮತ್ತು ಕಠಿಣ ಹೃದಯಿಗಳಾಗಿ ನಿರಪರಾಧಿ ಮುಸ್ಲಿಮರ ರಕ್ತಪಾತ ಮಾಡುತ್ತಿದ್ದಾರೆ.

ಖುತ್‌ಬದ ಕೊನೆಯಲ್ಲಿ ಹುಝೂರ್ ಹೇಳಿದರು: ನಾನು ಯಾವಾಗಲೂ ನಿಮ್ಮೊಂದಿಗೆ ಹೇಳುತ್ತಿರುವ ಹಾಗೆ ಫೆಲೆಸ್ತೀನಿನ ದೌರ್ಜನ್ಯ ಪೀಡಿತರಾದ ಜನರಿಗೋಸ್ಕರ ಪ್ರಾರ್ಥಿಸುವುದನ್ನು ಮುಂದುವರಿಸಿರಿ. ಅಲ್ಲಾಹನು ದೌರ್ಜನ್ಯಗಾರರನ್ನು ಹಿಡಿಗೂಡುವ ವ್ಯವಸ್ಥೆ ಬೇಗನೆ ಮಾಡುವವನಾಗಲಿ. ಆ ಸಹಾಬರನ್ನು ಹತ್ಯೆ ಮಾಡಿದ ಹಾಗೆ ನಿಷ್ಕಳಂಕರಾದ ಜನರನ್ನು ಕೊಲ್ಲಲಾಗುತ್ತಿದೆ. ಫೆಲೆಸ್ತೀನಿನ ಜನರನ್ನು ವಂಚನೆಯಿಂದ ಒಂದು ಸ್ಥಳಕ್ಕೆ ಕಳುಹಿಸಲಾಗುತ್ತಿದೆ. ಕೆಲವು ಸಾರಿ ಇನ್ನೊಂದು ಸ್ಥಳಕ್ಕೆ ಕಳುಹಿಸಲಾಗುತ್ತಿದೆ. ಅನಂತರ ಅವರ ಮೇಲೆ ಬಾಂಬ್ ದಾಳಿ ನಡೆಸಲಾಗುತ್ತಿದೆ. ಸರ್ವಶಕ್ತನಾದ ಅಲ್ಲಾಹನು ದಯೆದೋರುವವನಾಗಲಿ.

ಲೋಕದ ಸ್ಥಿತಿಯ ಸುಧಾರಣೆ ಬಗ್ಗೆ ಸಹ ಪ್ರಾರ್ಥಿಸಿರಿ. ಲೋಕ ಬಹಳ ವೇಗವಾಗಿ ವಿನಾಶದ ಕಡೆಗೆ ಸಾಗುತ್ತಿದೆ. ಯುದ್ಧದ ಚಿಹ್ನೆಗಳು ವರ್ಧಿಸುತ್ತಾ ಇವೆ. ಅಲ್ಲಾಹನು ಅಹ್ಮದಿಯರನ್ನು ಯುದ್ಧದ ಕೆಟ್ಟ ಪರಿಣಾಮಗಳಿಂದಲೂ ಅದರ ಕೆಡುಕುಗಳಿಂದಲೂ ಸಂರಕ್ಷಿಸುವವನಾಗಲಿ. ಪಾಕಿಸ್ಥಾನದ ಅಹ್ಮದಿಯರಿಗೋಸ್ಕರ ವಿಶಿಷ್ಟವಾಗಿ ಪ್ರಾರ್ಥಿಸಿರಿ. ಈಗ ಅವರಿಗೆ ಕಷ್ಟಗಳು ವರ್ಧಿಸುತ್ತಾ ಇವೆ. ಅಲ್ಲಾಹನು ದಯೆದೋರಲಿ ಮತ್ತು ದೌರ್ಜನ್ಯಗಾರರಿಂದ ಅಹ್ಮದಿಯರಿಗೆ ವಿಮೋಚನೆ ನೀಡುವವನಾಗಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At,* ***'Masjid Mubarak',*** *Islamabad, Tilford, UK.* On 07-06-2024

**Summarized by** *Majlis Ansarullah Bharat*

***Kannada Translation****:* M. Ubeidullah for Kannada Desk

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon